ಅ) ಈ ಸಂಸ್ಥೆಗಳಿಗೆ ವಿಶೇಷ ಸ್ಥಾನಮಾನ ನೀಡಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಸದರಿ ಸಂಸ್ಥೆಗಳಿಂದ ನಡೆಸಲ್ಪಡುವ ಪ್ರಾಥಮಿಕ, ಪ್ರೌಢ, ವೃತ್ತಿ ಶಿಕ್ಷಣ, ದಂತ, ವೈದ್ಯಕೀಯ, ತಾಂತ್ರಿಕ ಶಾಲಾ ಕಾಲೇಜುಗಳೆಷ್ಟು; ಜಿಲ್ಲಾವಾರು ವಿವರ ನೀಡುವುದು?

ಶ್ರೀ ಮೊ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 129 ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳಿವೆ.

ಆ) (i) ಸದರಿ ಶಾಲೆಗಳಲ್ಲಿ ನೇಮಕಾತಿ ಮಾಡುವಾಗ ಮತ್ತು ಬಡ್ತಿ ನೀಡುವಾಗ ಮೀಸಲು ನೀತಿಯನ್ನು ಅನುಸರಿಸಬೇಕಾಗಿರುವುದಿಲ್ಲ.

ii.ಭಾಷಾ ಅಲ್ಪಾ ಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಸಾಮರ್ಥ್ಯದ ಶೇಕಡ 50 ರಷ್ಟು ಸೀಟುಗಳನ್ನು ಭರ್ತಿ ಮಾಡಿಕೊಳ್ಳಬಹುದಾಗಿದೆ.

ಇ) ಈ ಸಂಸ್ಥೆಗಳಿಂದ 242 ಪ್ರಾಥಮಿಕ ಶಾಲೆಗಳು, 165 ಪ್ರೌಢ ಶಾಲೆಗಳು ಮತ್ತು 22 ಕಿರಿಯ ಕಾಲೇಜುಗಳು, ಮತ್ತು 7 ವೈದ್ಯಕೀಯ, 10 ದಂತ, 1 ಫಾರ್ಮಸಿ, 4 ನರ್ಸಿಂಗ್ ಮತ್ತು 4 ಪಿಜಿಯೋಥೆರಪಿ ಕಾಲೇಜುಗಳು ನಡೆಯುತ್ತಿವೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ.

ರಾಜ್ಯದಲ್ಲಿ ಮೇವಿನ ಕೊರತೆ ನಿವಾರಿಸಲು ಕ್ರಮ

3059 (3584) : ಶ್ರೀ ಆತ್ಮಾನಂದ .ಎಂ.ಎಸ್ (ಮಂಡ್ಯ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯಿಂದಾಗಿ ಮೇವಿನ ಕೊರತೆ ಉಂಟಾಗಿದೆಯೇ?

ಆ) ಹಾಗಿದ್ದಲ್ಲಿ, ಮೇವಿನ ಕೊರತೆಯನ್ನು ನಿವಾರಿಸಲು ಸರಕಾರವು ಕೈಗೊಂಡಿರುವ ಕ್ರಮಗಳೇನು:

ಇ) ಮೇವು ಬ್ಯಾಂಕ್‌ಗಳನ್ನೇನಾದರೂ ತೆರೆಯುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ;

ಈ) ಇದ್ದಲ್ಲಿ ಇದರ ಬಗೆಗಿನ ವಿವರಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಹೌದು

ಆ) ಮೇವಿನ ಕೊರತೆ ನಿವಾರಿಸಲು ಸರ್ಕಾರವು ಬಿಡುಗಡೆ ಮಾಡಿದ ಅನುದಾನ ಈ ಕೆಳಕಂಡಂತೆ ಇದೆ.

	ರೂ.ಲಕ್ಷಗಳಲ್ಲಿ
1. ಮೇವು ಸಾಗಾಣಿಕೆಗೆ	48.00
2. ಮಿನಿಕಿಟ್ ಕಾರ್ಯಕ್ರಮ	100.00
3. ಸರ್ಕಾರಿ ಫಾರಂಗಳಲ್ಲಿ ಮೇವು ಬೆಳೆಯಲು	227.00
4. ಮೇವಿನಬ್ಯಾಂಕ್:ಗೋಶಾಲೆ ಗಳನ್ನು ತೆರೆಯುವ ಬಗ್ಗೆ	300.00
5. ಔಷಧಿ ಖರೀದಿ	300.00

19 ಮೇವು ಬ್ಯಾಂಕ್‌ಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಜಿಲ್ಲಾ	ತಾಲ್ಲೂಕ್	ಸ್ಥಳ
1. ಬಳ್ಳಾರಿ–6	ಹಗರಿಬೊಮ್ಮನ ಹಳ್ಳಿ	ಹಗರಿಬೊಮ್ಮನಹಳ್ಳಿ–ಮುಚ್ಚಿದ
	ಕೂಡ್ಲಗಿ	ಕೂಡ್ಲಗಿ–ಮುಚ್ಚಿದೆ
	ಕೂಡ್ಲಗಿ	ಕೊಟ್ಟೂರು–ಮುಚ್ಚಿದೆ
	ಕೂಡ್ಲಗಿ	ಉಜ್ಜನಿ–ಮುಚಿದೆ
	ಹಡಗಲಿ	ಹಡಗಲಿ–ಮುಚ್ಚಿದೆ
	ಹಡಗಲಿ	ಹಿರೆಹಡಗಲಿ–ಮುಚ್ಚಿದೆ
2. ಚಿತ್ರದುರ್ಗ–8	ಚಳ್ಳಕೆರೆ	ಕುದಾಪುರ
	ಚಳ್ಳಕೆರೆ	ಉಳ್ಳವರ್ತಿ
	ಹಿರಿಯೂರು	ಬಬ್ಬೂರು
	ಕಸಬ	ಚಿಕ್ಕಸಿದ್ದಪ್ಪನಹಳ್ಳಿ
	ಹೊಳಲ್‌ಕೆರೆ	ಸೀಬಾರ
	ಮೊಳಕಾಲ್ಮೂರು	ಗುಂದೇರಿ
	ಹೊಸದುರ್ಗ	ರಾಯಪುರ
	ಹೊಸದುರ್ಗ	ಹೊಸದುರ್ಗ
3. ಕೊಪ್ಪಳ–1	ಕೊಪ್ಪಳ	ಮುನಿರಾಬಾದ್–ಮುಚ್ಚಿದೆ
4. ತುಮಕೂರು–2	ಕೊರಟಗೆರೆ	ಕೊರಟಗೆರೆ–ಮುಚಿದೆ
	ತಿಪಟೂರು	ತಿಪಟೂರು
5. ಗುಲ್ಬರ್ಗಾ–2	ಸೇಡಂ	ಮಲ್ಕೆ
	ಚಿತ್ತಾಪುರ	ಗುಂಡಗುತ್ತಿ

ಪ್ರಾರಂಭಿಕವಾಗಿ ಪಂಜಾಬ್ ರಾಜ್ಯದಿಂದ 6 ರೈಲುಗಾಡಿ ಮೇವವನ್ನು ಖರೀದಿಸಲು ನಿರ್ದರಿಸಲಾಗಿದೆ. ಈ ರೈಲುಗಾಡಿಗಳನ್ನು ಕೋಲಾರ (2 ರೈಲುಗಾಡಿ) ತುಮಕೂರು, ಕೊಪ್ಪಳ, ಚಿತ್ರದುರ್ಗ ಮತ್ತು ಗದಗ (ತಲಾ ಒಂದು ರೈಲುಗಾಡಿ) ಜಿಲ್ಲೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗವಾಗದಂತಹ ಮಂಡ್ಯ ಜಿಲ್ಲೆಯ ಕಬ್ಬನ್ನು ಒಂದು ಟನ್ನಿಗೆ ರೂ.600–00ಗಳ ದರದಲ್ಲಿ ಖರೀದಿಸಲು ನಿರ್ಧರಿಸಲಾಗಿದೆ. ಈ ನಿರ್ಣಯವು ಮಂಡ್ಯ ಜಿಲ್ಲೆಯ ರೈತರಿಗೂ ಮತ್ತು ಬರಪೀಡಿತ ಜಿಲ್ಲೆಗಳ ಜಾನುವಾರುಗಳಿಗೂ ಫಲಪ್ರದವಾಗಿರುತ್ತದೆ. ದಿನಾಂಕ: 8–7–2003 ರವರೆಗೆ ಸರಬರಾಜು ಮಾಡಿರುವ ಕಬ್ಬಿನ ಪ್ರಮಾಣ ಈ ಕೆಳಕಂಡಂತಿದೆ.

1 ಕೋಲಾರ	337 ಟನ್
2 ತುಮಕೂರು	15 ಟನ್
3 ಕೊಪ್ಪಳ	724 ಟನ್
ಒಟ್ಟುಲ್ಪ	**1076** ಟನ್

ಇತರೆ ಪ್ರದೇಶಗಳಿಂದ ಲಭ್ಯವಿರಬಹುದಾದ ಅನುಪಯೋಗಿ ಹೆಚ್ಚುವರಿ ಕಬ್ಬನ್ನು ಜಿಲ್ಲಾಧಿಕಾರಿಗಳು ಖರೀದಿಸಬಹುದಾಗಿದೆ.

ಇ) ಅವಶ್ಯಕತೆ ಅನುಸಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುವರು.

ಈ) ಈಗಾಗಲೇ 19 ಮೇವು ಬ್ಯಾಂಕ್‌ಗಳನ್ನು ತೆರೆಯಲಾಗಿದೆ. ಅವಶ್ಯಕತೆಗೆ ತಕ್ಕಂತೆ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವರು

ರಾಜ್ಯದಲ್ಲಿ ಜಾನುವಾರುಗಳ ಹಾಗೂ ಮೇವಿನ ಕುರಿತು

3104 (3440) : ಶ್ರೀ ಕೃಷ್ಣಮೂರ್ತಿ.ಎ.ಆರ್ (ಸಂತೇಮರಳ್ಳಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಸು,ಎಮ್ಮೆ,ಕುರಿ,ಮೇಕೆ ಹಾಗೂ ಇತರೆ ಜಾನುವಾರುಗಳ ಸಂಖ್ಯೆ ಎಷ್ಟು; ಸದರಿ ಜಾನುವಾರುಗಳ ಸಂಖ್ಯೆ ಎಷ್ಟು; ಸದರಿ ಜಾನುವಾರುಗಳಿಗೆ ಪ್ರತಿ ಜಾನುವಾರಿಗೆ ಪ್ರತಿ ವರ್ಷಕ್ಕೆ ಎಷ್ಟು ಮೇವು ಅಗತ್ಯ ಇರುತ್ತದೆ; ವಿವರ ನೀಡುವುದು;

ಆ) ರಾಜ್ಯದಲ್ಲಿ ಜಾನುವಾರುಗಳಿಗೆ ಸಾಕಾಗುವಷ್ಟು ಮೇವು ಈ ಸಾಲಿನಲ್ಲಿ ಲಭ್ಯವಾಗಿದೆಯೇ; ಇಲ್ಲದಿದ್ದಲ್ಲಿ, ಪಶುಸಂಗೋಪನಾ ಇಲಾಖೆಯಿಂದ ಜಾನುವಾರುಗಳ ಮೇವಿಗಾಗಿ ಕೈಗೊಳ್ಳಲಾಗಿರುವ ಕ್ರಮ ಏನು? ಕೈಗೊಳ್ಳದಿದ್ದಲ್ಲಿ, ಕ್ರಮ ಏನು? ಕೈಗೊಳ್ಳದಿದ್ದಲ್ಲಿ, ಕಾರಣ ಏನು?

ಇ) ಹಾಲು ಒಕ್ಕೂಟದ ಮೂಲಕ ಹಸು-ಎಮ್ಮೆಗಳಿಗೆ ಮೇವು ವಿತರಣೆ ಮಾಡಲು ಇಲಾಖೆಯು ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ ಕಾರಣ ಏನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) 1997 ಜನುವಾರು ಗಣತಿ ವಿವರ ಈ ಕೆಳಕಂಡಂತಿದೆ.

ದನಗಳು	108.31
ಎಮ್ಮೆಗಳು	43.46
ಕುರಿಗಳು	80.03
ಮೇಕೆಗಳು	48.75
ಒಟ್ಟು	**280.76** ಲಕ್ಷ

ಜಾನವಾರುಗಳಿಗೆ ಬರಪರಿಸ್ಥಿತಿಯಲ್ಲಿ ಒಂದಕ್ಕೆ ಪ್ರತಿದಿನ 5–7 ಕೆ.ಜಿ. ಹಾಗೂ ವರ್ಷಕ್ಕೆ 2 ಟನ್ನಳಷ್ಟು ಒಣಮೇವು ಬೇಕಾಗುತ್ತದೆ.

ಆ) ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮೇವಿನ ಕೊರತೆ ಇದೆ. ಕೊರತೆಯನ್ನು ನೀಗಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ರೈತರು ಸಾಗಾಣಿಕೆ ಮಾಡುವ ಮೇವಿನ ಸಾಗಾಣಿಕೆಗಾಗಿ ಸಹಾಯಧನ	ರೂ.48.00ಲಕ್ಷಗಳು
ನೀರಾವರಿ ಸೌಲಭ್ಯವಿರುವ ರೈತರಿಗೆ ಮೇವು ಬೀಜದ ಕಿರುಪೊಟ್ಟಣಗಳನ್ನು ಉಚಿತವಾಗಿ ವಿತರಿಸಲು	ರೂ.100.00ಲಕ್ಷಗಳು
ಸರ್ಕಾರಿ ಕ್ಷೇತ್ರಗಳಲ್ಲಿ ಮೇವು ಬೆಳೆಸಲು	ರೂ.227.00ಲಕ್ಷಗಳು
ಮೇವು ಬ್ಯಾಂಕ್/ಗೋಶಾಲೆಗಳನ್ನು ಪ್ರಾರಂಭಿಸಲು	ರೂ.300.00ಲಕ್ಷಗಳು